ಸಮಗ್ರ ಶಿಕ್ಷಣ–ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–01,
ದೂರವಾಣಿ: 080–22483580, 22484720, ಫಾಕ್ಸ್ : 080–22104179, 22126718 ಇ–ಮೇಲ್: kpsssk2018@gmail.com

****

ಸಂಖ್ಯೆ:11656/ಎಸ್.ಎಸ್.ಎ/ಕೆಪಿಎಸ್/ಫಂಡ್/2018–19 ದಿನಾಂಕ:07.09.2019

ಜ್ಞಾಪನ

ವಿಷಯ: ಕರ್ನಾಟಕ ಪಬ್ಲಿಕ್ ಶಾಲೆಗಳ ಕೊಠಡಿಗಳ ದುರಸ್ಥಿಗೆ ಬಿಡುಗಡೆ ಮಾಡಿರುವ ಅನುದಾನಗಳಿಗೆ e-Procurement ಮೂಲಕ ಟೆಂಡರ್ ಕರೆಯುವ ಕುರಿತು.

ಉಲ್ಲೇಖ: 1. ಈ ಕಚೇರಿ ಪತ್ರ ಸಂಖ್ಯೆ:SSK/QMT/KPS/Fund/2018-19, ದಿನಾಂಕ: 12.10.2018.
2. ಉಪನಿರ್ದೇಶಕರು(ಆಡಳಿತ), ಸಾಶಿಇ, ಹಾಸನ ಜಿಲ್ಲೆರವರ ಪತ್ರ ಸಂಖ್ಯೆ: ಸಿ–1, ಆರ್.ಎಂ.ಎಸ್.ಎ/ ಕೆಪಿಎಸ್.ಶಾ.ಮಾ/2019–20, ದಿನಾಂಕ:04.07.2019
3. ಸರ್ಕಾರದ ಆದೇಶ ಸಂಖ್ಯೆ: ಇಪಿ36 ಯೋಸಕ 2019, ಬೆಂಗಳೂರು, ದಿನಾಂಕ:23.07.2019.

****

ಪ್ರಸ್ತಾವನೆ:

2018–19 ನೇ ಸಾಲಿನಲ್ಲಿ 176 ಕರ್ನಾಟಕ ಪಬ್ಲಿಕ್ ಶಾಲೆಗಳ 864 ಕೊಠಡಿಗಳಿಗೆ ತಲಾ ರೂ.1.00 ಲಕ್ಷದಂತೆ ಒಟ್ಟು **ರೂ.864.00 ಲಕ್ಷ** ಅನುದಾನವನ್ನು ಉಲ್ಲೇಖ(1) ರಂತೆ ಬಿಡುಗಡೆ ಮಾಡಲಾಗಿತ್ತು. 2019–20 ರ ಮಾರ್ಚ್ ಮಾಹೆ ಅಂತ್ಯಕ್ಕೆ ಜಿಲ್ಲೆಯವರಿಂದ ಉಪಯೋಗಿತಾ ಪ್ರಮಾಣ ಪತ್ರ ಪಡೆಯಲಾಗಿ, **ರೂ.610.94 ಲಕ್ಷ** ಅನುದಾನ ಖರ್ಚಾಗದೆ ಬಾಕಿ ಉಳಿದಿರುವುದು ಕಂಡುಬಂದಿರುತ್ತದೆ. ಅನುದಾನ ಸಂಪೂರ್ಣವಾಗಿ ವೆಚ್ಚವಾಗದೇ ಇರುವುದಕ್ಕೆ ಜಿಲ್ಲೆಯವರನ್ನು ಮತ್ತು ಶಾಲೆಯವರನ್ನು ಸಂಪರ್ಕಿಸಿದಾಗ ಉಲ್ಲೇಖ(2)ರಲ್ಲಿ ಕೆಳಕಂಡ ಕಾರಣಗಳನ್ನು ನೀಡಿರುತ್ತಾರೆ.

1. ಕೆಲವು ಕೆಪಿಎಸ್ ಶಾಲೆಗಳ ಕೊಠಡಿಗಳ ದುರಸ್ಥಿಗೆ ರೂ.5.00 ಲಕ್ಷಕ್ಕಿಂತ ಅಧಿಕ ಅನುದಾನ ಬಿಡುಗಡೆಯಾಗಿದ್ದು, ಕೆ.ಟಿ.ಪಿ.ಪಿ–2000 ರ ನಿಯಮಾನುಸಾರ ಇ–ಪ್ರೊಕ್ಯೂರ್ಮೆಂಟ್ ಮಾಡಬೇಕಾಗಿರುವ ಹಿನ್ನಲೆಯಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದ ಸಾಧ್ಯವಾಗಿಲ್ಲವೆಂದು ತಿಳಿಸಿರುತ್ತಾರೆ.
2. ಜಿಲ್ಲಾ ಹಂತದಲ್ಲಿ ಶಾಲೆಯವರಿಗೆ ತಾಂತ್ರಿಕ ಮಾರ್ಗದರ್ಶನ ಮಾಡುವ ಸಂಬಂಧ ಇಲಾಖೆ ವತಿಯಿಂದ ಪರಿಣಿತ ತಜ್ಞರು ಇಲ್ಲದೆ ಇರುವುದರಿಂದ ಅನುದಾನ ಬಳಕೆಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಕೊಠಡಿಗಳ ದುರಸ್ಥಿ ಕಾಮಾಗಾರಿಗಳನ್ನು ಹಾಗೂ ನೆಲಸಮಗೊಳಿಸುವ ಮತ್ತು ಮರುನಿರ್ಮಾಣದ ಕಾಮಾಗಾರಿಗಳನ್ನು ಆಯಾ ಜಿಲ್ಲೆಗಳಲ್ಲಿ ಗುಣಮಟ್ಟವಾಗಿ ನಿರ್ವಹಿಸುವ ಸಂಸ್ಥೆಗಳಾದ ಲೋಕೋಪಯೋಗಿ ಇಲಾಖೆ/ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ/ ಕೆ.ಆರ್.ಐ.ಡಿ.ಎಲ್/ ಉತ್ತಮವಾಗಿ ಕಾರ್ಯನಿರ್ವಹಿಸುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಂಸ್ಥೆಗಳಿಂದ ನಿಯಾಮಾನುಸಾರ ನಿರ್ವಹಿಸತಕ್ಕದ್ದು ಮತ್ತು ನಿರ್ಮಾಣ ಕಾಮಾಗಾರಿಗಳನ್ನು ಕಡ್ಡಾಯವಾಗಿ 1ನೇ ಮತ್ತು 2ನೇ ದರ್ಜೆಯ ಗುತ್ತಿಗೆದಾರರರಿಂದಲೇ ನಿರ್ವಹಿಸತಕ್ಕದ್ದು ಎಂದು ಉಲ್ಲೇಖ(3)ರ ಸರ್ಕಾರದ ಆದೇಶದ ಸಂಖ್ಯೆ: ಇಪಿ36 ಯೋಸಕ 2019, ಬೆಂಗಳೂರು, ದಿನಾಂಕ:23.07.2019 ರಲ್ಲಿ ತಿಳಿಸಲಾಗಿದೆ.

ಮೇಲ್ಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಆದೇಶ:

2018–19 ನೇ ಸಾಲಿನಲ್ಲಿ 176 ಕರ್ನಾಟಕ ಪಬ್ಲಿಕ್ ಶಾಲೆಗಳ ಕೊಠಡಿಗಳ ದುರಸ್ಥಿಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ದುರಸ್ಥಿ ಅನುದಾನದಲ್ಲಿ ರೂ.1.00 ಲಕ್ಷಕ್ಕೂ ಅಧಿಕ ಅನುದಾನವಿರುವ ಶಾಲೆಗಳು ಖರ್ಚು ಮಾಡದೇ ಇದ್ದಲ್ಲಿ ಹಾಗೂ ಮುಂದೆ ಬಿಡುಗಡೆ ಮಾಡುವ ದುರಸ್ಥಿ ಅನುದಾನದಲ್ಲೂ ಸಹ ರೂ.1.00 ಲಕ್ಷಕ್ಕೂ ಅಧಿಕ ಅನುದಾನ ಬಿಡುಗಡೆಯಾದರೆ, ಮೇಲ್ಕಂಡ ಉಲ್ಲೇಖ(3) ರಲ್ಲಿರುವ ಸರ್ಕಾರಿ ಆದೇಶ ಸಂಖ್ಯೆ:ಇಪಿ36 ಯೋಸಕ 2019, ಬೆಂಗಳೂರು, ದಿನಾಂಕ:23.07.2019 ರಲ್ಲಿ ತಿಳಿಸಿರುವಂತೆ ಕ್ರಮವಹಿಸುವುದು.

ಸೂಚನೆಗಳು:

1. ರೂ1.00 ಲಕ್ಷಕ್ಕಿಂತ ಅಧಿಕ ಮೊತ್ತದ ದುರಸ್ಥಿ ಅನುದಾನ ಬಿಡುಗಡೆಯಾಗಿದ್ದರೆ/ ಬಿಡುಗಡೆಯಾದರೆ ಪ್ರಾಂಶುಪಾಲರು ಮತ್ತು ಉಪಪ್ರಾಂಶುಪಾಲರು, ಕರ್ನಾಟಕ ಪಬ್ಲಿಕ್ ಶಾಲೆ ಇವರು ಪ್ರಸ್ತಾವನೆಯನ್ನು ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸಲ್ಲಿಸುವುದು.
2. ಆಯಾ ಜಿಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಇವರು ವಿಳಂಬ ಮಾಡದೇ ಶಾಲೆಯವರಿಂದ ಅಗತ್ಯ ಮಾಹಿತಿಯನ್ನು ಪಡೆದು ಜಿಲ್ಲೆಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರಿಗೆ ಸಲ್ಲಿಸಿ, ಕ್ರಮವಹಿಸವುದು.
3. ಬಿಡುಗಡೆ ಮಾಡಲಾದ ಅನುದಾನವನ್ನು ನಿಗದಿತ ಉದ್ದೇಶಕ್ಕೆ ನಿಯಾಮಾನುಸಾರ ಭರಿಸತಕ್ಕದ್ದು ಹಾಗೂ ನಿಗದಿತ ಕಾಲವಕಾಶದಲ್ಲಿ ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಈ ಕಚೇರಿಗೆ ವರದಿ ಸಲ್ಲಿಸತಕ್ಕದ್ದು.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ–ಕರ್ನಾಟಕ
ಬೆಂಗಳೂರು

ಪ್ರತಿಯನ್ನು ಮಾಹಿತಿಗಾಗಿ:

1. ಪ್ರಧಾನ ಕಾರ್ಯದರ್ಶಿಗಳು(ಪ್ರಾ & ಪ್ರೌ), ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು
4. ರಾಜ್ಯದ ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ.
5. ಅಪರ ಆಯುಕ್ತರು, ಕಲ್ಬುರ್ಗಿ ಮತ್ತು ಬೆಳಗಾವಿ ವಿಭಾಗ, ಸಾರ್ವಜನಿಕ ಶಿಕ್ಷಣ ಇಲಾಖೆ.

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಉಪ ಯೋಜನಾ ಸಮನ್ವಯಾಧಿಕಾರಿಗಳು–2, ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ.
3. 276 ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾಂಶುಪಾಲರು ಮತ್ತು ಉಪಪ್ರಾಂಶುಪಾಲರಿಗೆ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮುಖಾಂತರ.
4. 276 ಕರ್ನಾಟಕ ಪಬ್ಲಿಕ್ ಶಾಲೆಗಳ ಪ್ರಾಂಶುಪಾಲರು ಮತ್ತು ಉಪಪ್ರಾಂಶುಪಾಲರಿಗೆ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮುಖಾಂತರ.